## 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ

**ವಿಶೇಷ ಮೊಕದ್ದಮೆ ಸಂಖ್ಯೆ- 816/2021**

ಪ್ರಾಸಾಃ- 20 ಚಾಸಾಃ- 26

ಸಾಕ್ಷಿಯ ಹೆಸರು : ರಮೇಶ್

ತಂದೆಯ ಹೆಸರು : ಅಂಜಿನಪ್ಪ

ವಯಸ್ಸು : 29 ವರ್ಷ

ವೃತ್ತಿ : ವ್ಯವಸಾಯ

ವಾಸಸ್ಥಳ : ಬಸಾಪುರ, ಕೊಪ್ಪಳ ಜಿಲ್ಲೆ

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 28.3.2025

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

1. ಚಾಸಾ 28 ಗೊತ್ತು. ನಾನು ಈ ಮೊದಲು ಚಾಸಾ 29 ರವರ ಕಾರಿನ ಚಾಲಕನಾಗಿ ಕೆಲಸ ಮಾಡುತ್ತಿದ್ದೆನು. ಸದರಿ ಕಾರಿನ ನಂಬರ್ ನನಗೆ ಗೊತ್ತಿಲ್ಲ, ಅದು ಐ 20 ಕಾರು ಆಗಿರುತ್ತದೆ. ಆರೋಪಿತರು ನನಗೆ ಗೊತ್ತಿಲ್ಲ, 3 ಮತ್ತು 4 ನೇ ಆರೋಪಿತರು ಒಂದು ಬಾರಿ ನನ್ನ ಕಾರಿನಲ್ಲಿ ಬಳ್ಳಾರಿಯಿಂದ ಹೊಸಪೇಟೆಗೆ ಹೋಗಿ ಅಲ್ಲಿಂದ ಬಳ್ಳಾರಿಗೆ ಮರಳಿ ಬಂದಿರುತ್ತಾರೆ. ಅವರು ನನ್ನ ಕಾರಿನಲ್ಲಿ 3-4 ವರ್ಷಗಳ ಹಿಂದೆ ಬಂದಿದ್ದರು. ಇದನ್ನು ಹೊರತುಪಡಿಸಿ ನನಗೆ ಏನೂ ಗೊತ್ತಿಲ್ಲ. ಪೋಲೀಸರು ನನ್ನ ಬಳಿ ಇದ್ದ ಕಾರನ್ನು ಜಪ್ತುಗೊಳಿಸಿದ್ದರು. ಸಾಕ್ಷಿಯು ಪಂಚನಾಮೆಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿಪಿ-61 ಎಂದು, ಸಾಕ್ಷಿಯ ಸಹಿಯನ್ನು ನಿಪಿ-61(ಎ) ಎಂದು ಗುರುತಿಸಲಾಯಿತು. ನಿಪಿ-61 ರ ಕಾಲಕ್ಕೆ ತೆಗೆದ ಎರಡು ಪೋಟೋಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-62 ಮತ್ತು ನಿಪಿ-63 ಎಂದು ಗುರುತಿಸಲಾಯಿತು. ಪೋಲೀಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ. ಮೃತರ ಬಗ್ಗೆ ನನಗೆ ಗೊತ್ತಿಲ್ಲ ಮತ್ತು ಅವರು ಯಾವ ಕಾರಣಕ್ಕೆ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದು ಅದನ್ನು ಪುರಸ್ಕರಿಸಲಾಗಿದೆ).

**ಪಾಟೀ ಸವಾಲುಃ ಅಭಿಯೋಜಕರವರಿಂದಃ**

2. ದಿಃ 20-3-2021 ರಂದು ಐ 20 ಕಾರ್ ನಂಬರ್ ಕೆ ಎ 18 ಪಿ 1523 ರಲ್ಲಿ ಹೊಸಪೇಟೆಗೆ 3 ಮತ್ತು 4 ನೇ ಆರೋಪಿತರನ್ನು ಕರೆದುಕೊಂಡು ಹೋಗಿದ್ದೆನು ಎಂದರೆ ದಿನಾಂಕ ನೆನಪಿಲ್ಲ ಆದರೆ ಕರೆದುಕೊಂಡು ಹೋಗಿರುತ್ತೇನೆ. ಟಿ ಬಿ ಡ್ಯಾಂ ಸರ್ಕಲ್ ಬಳಿ ನನ್ನ ಕಾರನ್ನು ನಿಲ್ಲಿಸಿದಾಗ ಇನ್ನೊಂದು ಕಾರಿನಲ್ಲಿ ಒಬ್ಬ ವ್ಯಕ್ತಿ ಬಂದಿದ್ದು ಅದರಲ್ಲಿ ಇಬ್ಬರು ಮಹಿಳೆಯರು ಬಂದಿದ್ದು ಅವರನ್ನು ಆರೋಪಿತರು ಮಾತನಾಡಿಸಿದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಸದರಿ ಇಬ್ಬರು ಮಹಿಳೆಯರನ್ನು ದಾಸಾಪುರ ಕ್ರಾಸ್‌ನಲ್ಲಿ ಎಲ್ ಎಲ್ ಸಿ ಕೆನಾಲ್ ಬಳಿ ಕರೆದುಕೊಂಡು ಹೋಗಿ ಕೊಲೆ ಮಾಡಿರುತ್ತಾರೆ ಎಂದು ಹಾಗೂ ಅವರನ್ನು ಕಾಲುವೆಗೆ ಬೀಸಾಡಿರುತ್ತಾರೆ ಎಂದು ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ, ಈಗ ಓದಿ ಹೇಳಿದಂತೆ ದಿಃ 17-6-2021 ರಂದು ತನಿಖಾಧಿಕಾರಿಯವರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-64 ಎಂದು ಗುರುತಿಸಲಾಯಿತು. ಸದರಿ ಕೊಲೆ ಪ್ರಕರಣದ ದಾಖಲಾದ ಕಾರಣ ಪೋಲೀಸರ ಮುಂದೆ ನಾನು ಮತ್ತು ಚಾಸಾ 29 ರವರು ಆರೋಪಿ 3 ಮತ್ತು 4 ರವರು ಕರೆದುಕೊಂಡು ಹೋದ ಕಾರು ಹಾಜರುಪಡಿಸಿದಂತೆ ನಿಪಿ-61 ರಂತೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ಕುರಿತಂತೆ ನಿಪಿ-62 ಮತ್ತು 63 ರಂತೆ ಪೋಟೋಗಳನ್ನು ತೆಗೆಸಿರುತ್ತಾರೆ ಎಂದರೆ ಸರಿಯಲ್ಲ.

3. ದಿಃ 10-8-2021 ರಂದು ಆರೋಪಿತರ ಕೃತ್ಯದ ಬಗ್ಗೆ ಈಗ ಓದಿ ಹೇಳಿದಂತೆ ಮರು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-65 ಎಂದು ಗುರುತಿಸಲಾಯಿತು. ಘಟನೆಯ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಸ್ ಆರ್ ಪಿ ಮತ್ತು ಎಸ್ ಆರ್ ಎಸ್ ವಕೀಲರು ಹಾಜರಿದ್ದು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ .**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೆ. ಸರಿ ಇದೆ.**

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ಬಳ್ಳಾರಿ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆ- 816/2021**

**ಪ್ರಾಸಾಃ- 21 ಚಾಸಾಃ- 27**

| | | |
|---|---|---|
| ಸಾಕ್ಷಿಯ ಹೆಸರು | : | ಮಂಜು |
| ತಂದೆಯ ಹೆಸರು | : | ಎಲ್ಲಪ್ಪ |
| ವಯಸ್ಸು | : | 25 ವರ್ಷ |
| ವೃತ್ತಿ | : | ಬೆಲ್ದಾರ್ ಕೆಲಸ |
| ವಾಸಸ್ಥಳ | : | ಹೊಸಪೇಟೆ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 28.3.2025**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

1. ನಾನು ನದಾಫ್ ಲಾಡ್ಜ್‌ನಲ್ಲಿ 2020-2021 ರ ಸಾಲಿನಲ್ಲಿ ರೂಮ್ ಬಾಯ್ ಆಗಿ ಕೆಲಸ ಮಾಡಿರುತ್ತೇನೆ. ನಾನು ಆರೋಪಿತರನ್ನು ನೋಡಿರುವುದಿಲ್ಲ. ದಿಃ 20-3-2021 ರಂದು 1 ನೇ ಆರೋಪಿಯು ನಮ್ಮ ಲಾಡ್ಜ್‌ನಲ್ಲಿ ಎರಡು ರೂಮು ತೆಗೆದುಕೊಂಡಿದ್ದನು. ಆತನ ಜೊತೆಗೆ ಯಾರು ಬಂದಿದ್ದರು ಎಂದು ನಾನು ನೋಡಿರುವುದಿಲ್ಲ. ಆತನ ಜೊತೆ ಯಾರು ಬಂದಿರುತ್ತಾರೆ ಎಂದು ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿರುವುದಿಲ್ಲ. ನನಗೆ ಜಯಮ್ಮ ಮತ್ತು ರಾಮಲಕ್ಷ್ಮಿ ಗೊತ್ತಿಲ್ಲ. ಸದರಿ ಲಾಡ್ಜ್‌ನ ಮಾಲೀಕರ ಹೆಸರು ದಾವಲ್ ಸಾಬ್. ಪೋಲೀಸರು ನಮ್ಮ ಲಾಡ್ಜ್‌ಗೆ ಬಂದಿದ್ದರು. ನಮ್ಮ ಬಳಿಯಿಂದ ಯಾವುದೇ ದಾಖಲೆಗಳನ್ನು ಪಡೆದಿರುವುದಿಲ್ಲ. ಸಾಕ್ಷಿಗೆ ನದಾಫ್ ಲಾಡ್ಜ್‌ನ ದಾಖಲೆಗಳನ್ನು ತೋರಿಸಿದ್ದು ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳು ನಕಲು ಪ್ರತಿಯಾದ್ದರಿಂದ ನಿಶಾನೆ ಎಂದು ಗುರುತಿಸಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದು ಅದನ್ನು ಪುರಸ್ಕರಿಸಲಾಗಿದೆ).**

2- ಫ್ರಾ ಸಾ 21 ವಿಶೇಷ ಮೊಕದ್ದಮೆ ಸಂಖ್ಯೆ- 816/2021

**ಪಾಟೀ ಸವಾಲುಃ ಅಭಿಯೋಜಕರವರಿಂದಃ**

2. 1 ನೇ ಆರೋಪಿಗೆ ರೂಂ ನಂಃ 4 ಮತ್ತು 5 ನ್ನು ಆ ದಿನ ಲಾಡ್ಜ್ ನಲ್ಲಿ ಕೊಟ್ಟಿರುತ್ತೇನೆ ಎಂದರೆ ಸರಿ. ಆತನ ಜೊತೆಗೆ ಇಬ್ಬರು ಹೆಣ್ಣು ಮಕ್ಕಳು ಬಂದಿದ್ದರು ಎಂದರೆ ಸರಿ. ದಿಃ 21-3-2021 ರಂದು ಬೆಳಿಗ್ಗೆ 8-00 ಗಂಟೆಗೆ ರೂಮು ಖಾಲಿ ಮಾಡಿಕೊಂಡು ಹೋದರು ಎಂದರೆ ಸರಿ. 1 ನೇ ಆರೋಪಿಯು ಉಳಿದ ಆರೋಪಿತರು ಜೊತೆ ಆ ಇಬ್ಬರು ಹೆಣ್ಣು ಮಕ್ಕಳನ್ನು ಕೊಲೆ ಮಾಡಿರುತ್ತಾನೆ ಎಂದು ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಆ ಬಗ್ಗೆ ಈಗ ಓದಿ ಹೇಳಿದಂತೆ ತನಿಖಾಧಿಕಾರಿಯವರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-66 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ. ಎಸ್ ಆರ್ ಪಿ ವಕೀಲರಿಂದಃ**

3. ದಿಃ 20-3-2021 ರಂದು ಲಾಕ್ ಡೌನ್ ಇತ್ತು ಎಂದರೆ ಸರಿ. ಕರೋನಾ ಇರುವುದರಿಂದ ನಾವು ಯಾರಿಗೂ ರೂಮುಗಳನ್ನು ಕೊಡುತ್ತಿರಲಿಲ್ಲ ಆ ಕಾರಣ 1 ನೇ ಆರೋಪಿಯು ಇಬ್ಬರು ಮಹಿಳೆಯರೊಂದಿಗೆ ನಮ್ಮ ಲಾಡ್ಜ್ ಗೆ ಬಂದಿಲ್ಲ ಎಂದರೆ ಸರಿಯಲ್ಲ. ನಮ್ಮ ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಪಾಟೀ ಸವಾಲುಃ **2** ರಿಂದ **4** ನೇ ಆರೋಪಿ ಪರ ಶ್ರೀ. ಎಸ್ ಆರ್ ಪಿ ಮತ್ತು ಎಸ್ ಆರ್ ಎಸ್ ವಕೀಲರುಇ ರುವುದಿಲ್ಲಎಂದು ವಿನಂಕೊಂಡಿರುತ್ತಾರೆ .

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ಬಳ್ಳಾರಿ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆ- 816/2021**

**ಪ್ರಾಸಾಃ- 22 ಚಾಸಾಃ- 29**

| | | |
|---|---|---|
| ಸಾಕ್ಷಿಯ ಹೆಸರು | : | ಸಾಗರ್ |
| ತಂದೆಯ ಹೆಸರು | : | ಗೋವಿಂದರಾಜುಲು |
| ವಯಸ್ಸು | : | 25 ವರ್ಷ |
| ವೃತ್ತಿ | : | ವ್ಯಾಪಾರ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 28.3.2025**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

1. ನನ್ನದು ಕೆಎ 18 ಪಿ 1523 ಐ 20 ಕಾರು ಇತ್ತು. ಸದರಿ ಕಾರಿಗೆ ಚಾಸಾ 26 ರವರನ್ನು ಚಾಲಕನಾಗಿ ನೇಮಕ ಮಾಡಿಕೊಂಡಿದ್ದೆನು. 4 ವರ್ಷಗಳ ಹಿಂದೆ ಚಾಸಾ 26 ರವರು ಬಾಡಿಗೆಗೆ ಹೊಸಪೇಟೆ ಹೋಗಿ ಬರಬೇಕು ಎಂದು ನನಗೆ ಕರೆ ಮಾಡಿ ತಿಳಿಸಿದ್ದನು. ಸಾಯಂಕಾಲ ಮರಳಿ ಬಂದು ನನಗೆ ಬಾಡಿಗೆ ಕೊಟ್ಟು ಕಾರು ಬಿಟ್ಟು ಹೋಗಿರುತ್ತಾನೆ. ಮೂರು ದಿನಗಳ ನಂತರ ಮಹಿಳಾ ಪೋಲೀಸರು ನನಗೆ ಕರೆ ಮಾಡಿ ನಮ್ಮ ಕಾರು ತೆಗೆದುಕೊಂಡು ಬರಲು ಹೇಳಿದ ಮೇರೆಗೆ ನಾನು ಠಾಣೆಗೆ ಹೋದಾಗ ಅಲ್ಲಿ ಕೊಲೆಯಾಗಿರುತ್ತದೆ ಎಂದು ವಿಷಯ ತಿಳಿಸಿ ಪಂಚನಾಮೆ ಮಾಡಿಕೊಂಡು ನನ್ನ ಕಾರನ್ನು ತೆಗೆದುಕೊಂಡರು. ಸಾಕ್ಷಿಯು ನಿಪಿ-61 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-61(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-62 ಮತ್ತು 63 ನ್ನು ನೋಡಿ ಗುರುತಿಸಿರುತ್ತಾರೆ. ಯಾರು ಯಾರನ್ನುಕೊಲೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ಆರೋಪಿತರು ಮತ್ತು ಮೃತರ ಬಗ್ಗೆ ನನಗೇನು ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದು ಅದನ್ನು ಪುರಸ್ಕರಿಸಲಾಗಿದೆ).**

**ಪಾಟೀ ಸವಾಲುಃ ಅಭಿಯೋಜಕರವರಿಂದಃ**

2. ಚಾಸಾ 26 ರವರು 3 ಮತ್ತು 4 ನೆ ಆರೋಪಿತರನ್ನು ಬಾಡಿಗೆಗೆ ಕರೆದುಕೊಂಡು ಹೋಗಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಪೋಲೀಸ್ ಠಾಣೆಗೆ ಹೋದಾಗ 3 ಮತ್ತು 4 ನೇ ಆರೋಪಿತರು ಉಳಿದ ಆರೋಪಿತರ ಜೊತೆ ಸೇರಿ ರಾಮಲಕ್ಷ್ಮಿ ಮತ್ತು ಜಯಮ್ಮ ಇವರನ್ನು ದಾಸಾಪುರ ಕ್ರಾಸ್ ಬಳಿ ಕೊಲೆ ಮಾಡಿ ಕೆನಾಲ್‌ಗೆ ಶವಗಳನ್ನು ಹಾಕಿರುತ್ತಾರೆ ಎಂದು ಅವರ ಮೈಮೇಲೆ ಇದ್ದ ಬಂಗಾರವನ್ನು ತೆಗೆದುಕೊಂಡಿರುತ್ತಾರೆ ಎಂದು ಗೊತ್ತಾಯಿತು ಎಂದರೆ ಸರಿಯಲ್ಲ. ಆ ಬಗ್ಗೆ ಈಗ ಓದಿ ಹೇಳಿದಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-67 ಎಂದು ಗುರುತಿಸಲಾಯಿತು. ನಿಪಿ-67 ರಂತೆ ಹೇಳಿಕೆ ಕೊಟ್ಟಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್ ಆರ್ ಪಿ ಮತ್ತುಎ ಸ್ ಆರ್ ಎಸ್ ವಕೀಲರು ಇರುವುದಿಲ್ಲ ಎಂದು ವಿನಂತಿಸಿಕೊಂಡಿರುತ್ತಾರೆ .

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ಬಳ್ಳಾರಿ.

**<u>1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ</u>**

**<u>ವಿಶೇಷ ಮೊಕದ್ದಮೆ ಸಂಖ್ಯೆ:- 816/2021</u>**

**ಪ್ರಾಸಾ:- 23 ಚಾಸಾ:- 30**

| | | |
|---|---|---|
| ಸಾಕ್ಷಿಯ ಹೆಸರು | : | ರಜಿಯಾ |
| ಗಂಡನ ಹೆಸರು | : | ಹಜರತ್ |
| ವಯಸ್ಸು | : | 29 ವರ್ಷ |
| ವೃತ್ತಿ | : | ಗೃಹಿಣಿ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ:- 28.3.2025**

**<u>ಮುಖ್ಯ ವಿಚಾರಣೆ: ವಿಶೇಷ ಅಭಿಯೋಜಕರಿಂದ</u>**

1. ನಾನು 2021 ರಲ್ಲಿ ಬಳ್ಳಾರಿಯಲ್ಲಿ ರಾಮಾಂಜಿನೇಯ ನಗರದ ಬಾಡಿಗೆ ಮನೆಯಲ್ಲಿದ್ದೆನು. ಜಯಮ್ಮ ಮತ್ತು ರಾಮಲಕ್ಷ್ಮಿ ನನಗೆ ಗೊತ್ತಿಲ್ಲ. ನನಗೆ 1 ನೇ ಆರೋಪಿ ಗೊತ್ತಿಲ್ಲ. ಚಾಸಾ 1 ಗೊತ್ತಿಲ್ಲ. ಸದರಿಯವರಿಬ್ಬರ ಕೊಲೆಯಾದ ಬಗ್ಗೆ ನನಗೆ ಗೊತ್ತಿಲ್ಲ. ಪೋಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದು ಅದನ್ನು ಪುರಸ್ಕರಿಸಲಾಗಿದೆ).**

**<u>ಪಾಟೀ ಸವಾಲು: ಅಭಿಯೋಜಕರವರಿಂದ:</u>**

2. 2021 ರ ಸಾಲಿನಲ್ಲಿ ರಾಮಲಕ್ಷ್ಮಿ ಮತ್ತು ಜಯಮ್ಮ ರವರು ನಮ್ಮ ಮನೆಯಪಕ್ಕದಲ್ಲಿ ವಾಸವಾಗಿದ್ದರು ಎಂದರೆ ಸರಿ. ಚಾಸಾ 1 ರವರು ಜಯಮ್ಮನ ದೊಡ್ಡ ಮಗಳು ಎಂದರೆ ನನಗೆ ಗೊತ್ತಿಲ್ಲ. ಮೃತ ರಾಮಲಕ್ಷ್ಮಿ ಫೈನಾನ್ಸ್ ವ್ಯವಹಾರ ಮಾಡುತ್ತಿದ್ದಳು ಎಂದರೆ ಗೊತ್ತಿಲ್ಲ. 1 ನೇ ಆರೋಪಿಯು ನಮ್ಮ ಮನೆಯ ಪಕ್ಕ ವಾಸವಾಗಿದ್ದ ಎಂದರೆ ಗೊತ್ತಿಲ್ಲ. ಸದರಿ ಆರೋಪಿಯು ರಾಮಲಕ್ಷ್ಮಿ ಮತ್ತು ಜಯಮ್ಮ ಹೇಳಿದ ಕೆಲಸಗಳನ್ನು ಮಾಡುತ್ತಿದ್ದ ಎಂದರೆ ಗೊತ್ತಿಲ್ಲ. 4-5 ವರ್ಷಗಳ ಹಿಂದೆ ಅವರಿಬ್ಬರನ್ನು ನಾನು ಕೊನೆಯ ಬಾರಿ ನೋಡಿರುತ್ತೇನೆ. ಅವರಿಬ್ಬರು ಗುಡಿಗೆ ಹೋಗುತ್ತೇನೆ ಎಂದು ಹೇಳಿ ಹೋಗಿದ್ದರು. ನಂತರ ಅವರನ್ನು

ನಾನು ನೋಡಿರುವುದಿಲ್ಲ. ಆರೋಪಿತರು ಸದರಿ ಇಬ್ಬರನ್ನು ಕರೆದುಕೊಂಡು ಹೋಗಿ ದಾಸಾಪುರ ಕ್ರಾಸ್ ಬಳಿ ಕೊಲೆ ಮಾಡಿ ಕೆನಾಲ್‌ನಲ್ಲಿ ಶವ ಹಾಕಿರುತ್ತಾರೆ ಎಂದು ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಆ ಬಗ್ಗೆ ಈಗ ಓದಿ ಹೇಳಿದಂತೆ ದಿಃ 17-6-2021 ರಂದು ತನಿಖಾಧಿಕಾರಿಯವರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-68 ಎಂದು ಗುರುತಿಸಲಾಯಿತು. ಘಟನೆಯ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್ ಆರ್ ಪಿ ಮತ್ತು ಎಸ್ ಆರ್ ಎಸ್ ವಕೀಲರು ಇರುವುದಿಲ್ಲ ಎಂದು ವಿನಂತಿಸಿ ಕೊಂಡಿರುತ್ತಾರೆ .

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ಬಳ್ಳಾರಿ.

<u>1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ</u>

<u>ವಿಶೇಷ ಮೊಕದ್ದಮೆ ಸಂಖ್ಯೆ- 816/2021</u>

ಪ್ರಾಸಾಃ- 24 ಚಾಸಾಃ- 31

| | | |
|---|---|---|
| ಸಾಕ್ಷಿಯ ಹೆಸರು | : | ಮಮತಾ |
| ಗಂಡನ ಹೆಸರು | : | ಮಸ್ತಾನ್ |
| ವಯಸ್ಸು | : | 35 ವರ್ಷ |
| ವೃತ್ತಿ | : | ಕೂಲಿ ಕೆಲಸ |
| ವಾಸಸ್ಥಳ | : | ಬಳ್ಳಾರಿ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 28.3.2025

<u>ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ</u>

1. ನಾನು ಬಳ್ಳಾರಿಯಲ್ಲಿ ರಾಮಾಂಜಿನೇಯ ನಗರದಲ್ಲಿ ವಾಸವಾಗಿದ್ದೇನೆ. ಜಯಮ್ಮ ಮತ್ತು ರಾಮಲಕ್ಷ್ಮಿ ನನಗೆ ಗೊತ್ತು. ಅವರು ನಮ್ಮ ಮನೆಯ ಎದುರುಗಡೆ ವಾಸವಾಗಿದ್ದರು. ನನಗೆ 1 ನೇ ಆರೋಪಿ ಗೊತ್ತಿಲ್ಲ. ಚಾಸಾ 1 ಗೊತ್ತಿಲ್ಲ. ಬಹಳ ವರ್ಷಗಳ ಹಿಂದೆ ಸದರಿ ರಾಮಲಕ್ಷ್ಮಿ ಮತ್ತು ಜಯಮ್ಮ ರವರನ್ನು ನೋಡಿರುತ್ತೇನೆ. ಅವರು ಹೇಗೆ ಮತ್ತು ಯಾವ ಕಾರಣಕ್ಕೆ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದು ಅದನ್ನು ಪುರಸ್ಕರಿಸಲಾಗಿದೆ).**

**<u>ಪಾಟೀ ಸವಾಲುಃ ಅಭಿಯೋಜಕರವರಿಂದಃ</u>**

2. 2021 ರ ಸಾಲಿನಲ್ಲಿ ರಾಮಲಕ್ಷ್ಮಿ ಮತ್ತು ಜಯಮ್ಮ ರವರು ನಮ್ಮ ಮನೆಯ ಎದುರುಗಡೆ ವಾಸವಾಗಿದ್ದರು ಎಂದರೆ ಸರಿ. ಚಾಸಾ 1 ರವರು ಜಯಮ್ಮನ ದೊಡ್ಡ ಮಗಳು ಎಂದರೆ ನನಗೆ ಗೊತ್ತಿಲ್ಲ. ಮೃತ ರಾಮಲಕ್ಷ್ಮಿ ಫೈನಾನ್ಸ್ ವ್ಯವಹಾರ

ಮಾಡುತ್ತಿದ್ದಳು ಎಂದರೆ ಗೊತ್ತಿಲ್ಲ. 1 ನೇ ಆರೋಪಿಯು ನಮ್ಮ ಮನೆಯ ಪಕ್ಕ ವಾಸವಾಗಿದ್ದ ಎಂದರೆ ಗೊತ್ತಿಲ್ಲ. ಸದರಿ ಆರೋಪಿಯು ರಾಮಲಕ್ಷ್ಮಿ ಮತ್ತು ಜಯಮ್ಮ

ಹೇಳಿದ ಕೆಲಸಗಳನ್ನು ಮಾಡುತ್ತಿದ್ದ ಎಂದರೆ ಗೊತ್ತಿಲ್ಲ. 4-5 ವರ್ಷಗಳ ಹಿಂದೆ ಅವರಿಬ್ಬರನ್ನು ನಾನು ಕೊನೆಯ ಬಾರಿ ನೋಡಿರುತ್ತೇನೆ. ಅವರಿಬ್ಬರು ಗುಡಿಗೆ ಹೋಗುತ್ತೇವೆ ಎಂದು ಹೇಳಿ ಹೋಗಿದ್ದರು. ನಂತರ ಅವರನ್ನು ನಾನು ನೋಡಿರುವುದಿಲ್ಲ. ಆರೋಪಿತರು ಸದರಿ ಇಬ್ಬರನ್ನು ಕರೆದುಕೊಂಡು ಹೋಗಿ ದಾಸಾಪುರ ಕ್ರಾಸ್ ಬಳಿ ಕೊಲೆ ಮಾಡಿ ಕೆನಾಲ್‌ನಲ್ಲಿ ಶವ ಹಾಕಿರುತ್ತಾರೆ ಎಂದು ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಆ ಬಗ್ಗೆ ಈಗ ಓದಿ ಹೇಳಿದಂತೆ ದಿ: 17-6-2021 ರಂದು ತನಿಖಾಧಿಕಾರಿಯವರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-69 ಎಂದು ಗುರುತಿಸಲಾಯಿತು. ಘಟನೆಯ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು: ಆರೋಪಿತರ ಪರ ಶ್ರೀ. ಎಸ್ ಆರ್ ಪಿ ಮತ್ತು ಎಸ್ ಆರ್ ಎಸ್ ವಕೀಲರು ಇರುವುದಿಲ್ಲ ಎಂದು ವಿನಂತಿಸಿ ಕೊಂಡಿರುತ್ತಾರೆ .

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ಬಳ್ಳಾರಿ.